## ವಿಹಾರ



ಅದು ದೇವರೂ ತಡವಾಗಿ ಏಳುವ ದಿನ. ಖಾಲಿ ರೋಡಲ್ಲಿ ತಿಳಿ ಬಿಸಿಲಿಗೆ ಮೈ ಚಾಚಿ ಮಲಗಿದ್ದ ನಾಯಿಯೊಮ್ಮೆ ಕಾಲೆತ್ತಿ ಹೊರಳಾಡಿ ಮೈ ಮುರಿಯಿತು. ಊರೆಲ್ಲಾ ಮೌನ ವ್ರತ ಆಚರಿಸುತ್ತಿರುವಂತೆ ಶುರುವಾದ ಆ ದಿನ ಸ್ಕೂಲ್ ಬಸ್ಸುಗಳ ಗದ್ದಲವಿಲ್ಲ. ಆಫೀಸಿಗೆ ಹೊರಡುವ ಅಪ್ಪ ಅಮ್ಮಂದಿರ ಗಡಿಬಿಡಿ ಇಲ್ಲ. ಅರಚಿಕೊಳ್ಳುವ ಹಾರನ್‌ಗಳೂ ಇಲ್ಲ. ಕುಕ್ಕರ್ ಸೀಟಿ, ಮಿಕ್ಸಿ ಗಿರ್ರ್ ಅನ್ನುವ ಸದ್ದೂ ಸಹ ಕೇಳಿಸುತ್ತಿಲ್ಲ. 'ದಿನವೂ ಹೀಗೇ ಹಾಯಾಗಿದ್ದರೆ ಎಷ್ಟು ಚಂದ!' ಎಂದು ಮನೆ ಮುಂದೆ ಮೂರು ಚಕ್ರದ ಮೇಲೆ ನಿಂತಿರುವ, ಹಸಿರು ಹಳದಿ ಬಣ್ಣದ, ಸ್ಟ್ಯಾಂಡ್ ಇಲ್ಲದ, ಲಾಕ್ ಹಾಕಲಾಗದ ಪುಟಾಣಿ ಸೈಕಲ್ ಯೋಚಿಸಿತು.

ಪ್ರತಿ ದಿನ ಬೈಕು ಕಾರುಗಳದ್ದೇ ಗಲಾಟೆ. ಅವರ ಮಧ್ಯೆ ಈ ಪುಟಾಣಿ ಸೈಕಲ್ ಹೋಗುವುದುಂಟೇ? ಇಂದು ಎಲ್ಲರೂ ತಂತಮ್ಮ ಜಾಗದಲ್ಲಿ ಮೌನವಾಗಿ ಮಲಗಿದ್ದಾರೆ. ಇದೇ ಸಮಯದಲ್ಲಿ ನಾನೇ ಹೋದರೆ ಹೇಗೆ? ಈ ಅಪಾರ್ಟ್‌ಮೆಂಟ್‌ನೊಳಗಿನ ಕಾಲುದಾರಿ ಬಿಟ್ಟರೆ ಬೇರೆಲ್ಲೂ ನಾ ಹೋಗೇ ಇಲ್ಲ. ಅದೂ ಇತ್ತೀಚೆಗಂತೂ ಮನೆ ಕಾರಿಡಾರಿನಲ್ಲೇ ಬಾಕಿಯಾಗಿದ್ದೇನೆ. ನಾನೂ ಇದರಾಚೆಯ ಜಗತ್ತು ನೋಡಬೇಡವೇ? ಏನಾದರಾಗಲಿ, ಇಂದು ನಾನು ಈ ಅಪಾರ್ಟ್‌ಮೆಂಟ್ ಗೋಡೆ ದಾಟಿ ಹೋಗಲೇಬೇಕು ಎಂದು ತೀರ್ಮಾನಿಸಿತು. ತನಗಿಂತ ಸ್ವಲ್ಪ ದೊಡ್ಡವರಾದ ಎರಡು ಚಕ್ರದ ಸೈಕಲ್‌ಗಳು ಪ್ರತಿ ಸಂಜೆ ರೇಸ್ ಆಡುವುದು ಈ ಬಣ್ಣದ ಸೈಕಲ್‌ಗೆ ಗೊತ್ತಿದೆ. ಅವರು ಹೋಗುವ ದಾರಿಯನ್ನೂ ತಿಳಿದುಕೊಂಡಿದೆ. ಅದೇ ದಾರಿಯಲ್ಲೇ ನಾನೂ ಹೋಗುತ್ತೇನೆ ಎಂದುಕೊಂಡು ಹೊರಟೇಬಿಟ್ಟಿತು.

ಪಕ್ಕದ ಫ್ಲ್ಯಾಟ್‌ನ ಅಕ್ಕ ತನ್ನ ನಾಯಿಯನ್ನು ವಾಕಿಂಗ್ ಕರಕೊಂಡು ಹೋಗುತ್ತಾಳಲ್ಲಾ, ಅದು ಫಕ್ಕನೆ ಬೊಗಳಿದರೆ ಹೆದರಬಾರದು. ಇನ್ನೊಂದಷ್ಟು ಮುಂದೆ ಸಿಮೆಂಟ್ ಹಾಗೂ ಮರಳಿನ ರಾಶಿ ಹಾಕಿದ್ದಾರಲ್ಲಾ, ಅದನ್ನು ಹತ್ತಿಯೋ ಸುತ್ತಿಯೋ ಅಥವಾ ದಾಟಿಯೋ ಸಾಗಬೇಕು. ಪಕ್ಕದಲ್ಲೇ ಪಿಲ್ಲರ್ ಹಾಕಲು ಗುಂಡಿ ತೋಡಿದ್ದಾರಲ್ಲಾ, ಅದರೊಳಗೆ ಬೀಳದಂತೆ ಜಾಗರೂಕತೆಯಿಂದ ಹೋಗಬೇಕು – ಎಂದೆಲ್ಲಾ ಮನಸಲ್ಲೇ ಲೆಕ್ಕ ಹಾಕುತ್ತಾ ಸೈಕಲ್ ಸಾಗಿತು.

ಸಾಗುತ್ತಾ ಸಾಗುತ್ತಾ ಅಪಾರ್ಟ್‌ಮೆಂಟಿನ ಹಿಂಬದಿಗೆ ಬಂತು. ಹಿಂಬದಿಯ ಗೇಟ್ ತೆರೆದದ್ದು ನೋಡಿ ಅದಕ್ಕೆ ಬಹಳವೇ ಸಂತೋಷವಾಯ್ತು. ಮುಂದಿನ ಗೇಟ್‌ಗಿಂತಲೂ ಹಿಂದಿನ ಗೇಟ್‌ನಲ್ಲಿ ಹೋಗುವುದು ಸುಲಭ ಎಂದೂ ಎನಿಸಿತು. ಒಂದು ವೇಳೆ ಮುಂದಿನ ಗೇಟಲ್ಲಿ ಯಾರಾದರೂ ನನ್ನನ್ನು ತಡೆದರೆ? ಇಲ್ಲಂತೂ ಈಗ ಯಾರೂ ಇಲ್ಲ. ಹಾಗಾಗಿ, ತಡಮಾಡದೆ, ಸೀದಾ ಹೋಯ್ತು. ಅದೇನು ಸಂತೋಷ! ಅದೇನು ಉಲ್ಲಾಸ! ಈ ಬೆಳಗಿನ ತಿಳಿ ಬಿಸಿಲು ಎಷ್ಟು ಚೆನ್ನಾಗಿದೆ! ಈ ಗಾಳಿ ಎಷ್ಟು ಹಿತವಾಗಿದೆ! ಛೇ... ಇಂಥ ಸ್ವಾತಂತ್ರವನ್ನು ನಾನು ಹಿಂದೆಂದೂ ಅನುಭವಿಸಲೇ ಇಲ್ಲವಲ್ಲ! ದೊಡ್ಡವರೆಲ್ಲಾ ಸೇರಿ ಈ ಖುಷಿಯನ್ನು ನನಗೆ ಸಿಗದೇ ಇರುವ ಹಾಗೆ ಮಾಡಿದ್ದರಲ್ಲ... ಛೇ! ಎಂದು ಅದಕ್ಕೊಂದು ಕ್ಷಣ ಬೇಸರವಾಯ್ತು. ಈಗಲಾದರೂ ಹೀಗೆ ಸ್ವಚ್ಛಂದವಾಗಿ ಸುತ್ತಾಡುವ ಸುಖ ಸಿಕ್ಕಿದೆಯಲ್ಲಾ? ಅಷ್ಟು ಸಾಕು, ಎಂದುಕೊಂಡು ಗಲ್ಲಿಯಿಂದ ಮುಖ್ಯ ರಸ್ತೆಗೆ ಬಂತು. ಆಗ, ಸುರ್ರನೆ ಬೈಕೊಂದು ರಭಸದಿಂದ ನುಗ್ಗಿತು. ಸೈಕಲನ್ನು ನೋಡಿ ನಿಧಾನ ಮಾಡಿತು. ಅದು ತನಗೆ ಸಿಕ್ಕ ಮರ್ಯಾದೆಯೆಂದುಕೊಂಡ ಸೈಕಲ್, 'ನನಗಿಷ್ಟೊಂದು ಗೌರವವಿದೆ ಎಂದು ಇಲ್ಲಿವರೆಗೂ ಗೊತ್ತೇ ಇರಲಿಲ್ಲವಲ್ಲ' ಎಂದು ಬೀಗಿತು.

ಹಾಗೇ ಮುಂದಕ್ಕೆ ಹೋಗುತ್ತಾ ಒಂದು ಆಟೋ ಬಂತು. ಅದು ಜೋರಾಗಿ ಹಾರನ್ ಹಾಕಿ, ಸರ್ರಕ್ಕನೆ ತಿರುಗಿಸಿ ಹೊರಟು ಹೋಯ್ತು. ಸೈಕಲ್‌ಗೆ ಸ್ವಲ್ಪ ಭಯವೇನೋ ಆಯ್ತು. ಆದರೂ ಧೈರ್ಯ ತಂದುಕೊಂಡು ಇನ್ನೊಂದಷ್ಟು ಮುಂದಕ್ಕೆ ಹೋಗಲಾರಂಭಿಸಿತು. ಹೆಚ್ಚು ಹೆಚ್ಚು ವಾಹನಗಳು ಬರುತ್ತಾ ಸೈಕಲ್‌ನ ಆತಂಕ ಹೆಚ್ಚಿತಾದರೂ ಕೂಡಲೇ ಮರಳಿ ಹೋಗಲು ಸ್ವಾಭಿಮಾನ ಕೇಳಲಿಲ್ಲ. ಇನ್ನಷ್ಟು ಮುಂದಕ್ಕೆ, ರಸ್ತೆಯಾಚೆಗೆ ಹೋಗುವ ಪ್ರಯತ್ನ ಮಾಡಿತು. ಆದರೆ, ಯಾರಿಗೂ ನಾನು ಕಾಣಿಸುತ್ತಿಲ್ಲವೇನೋ ಎನಿಸಿ ಅಂಜಿಕೆ ಮೂಡತೊಡಗಿತು. ಕಾರೊಂದು ವೇಗವಾಗಿ ಬಂದು ಸೈಕಲ್‌ನ ಎಡ ಬದಿಗೆ ತಾಗಿಸುತ್ತಾ ಮುಂದಕ್ಕೆ ಹೋದಾಗ ಸೈಕಲ್ ಹೆದರಿ ಹಿಂದಕ್ಕೆ ಹಾರಲೇಬೇಕಾಯಿತು. ಈಗ ತಾನು ಎತ್ತ ಸಾಗಬೇಕು? ಎಡಕ್ಕೋ ಬಲಕ್ಕೋ ಮುಂದಕ್ಕೋ ಹಿಂದಕ್ಕೋ ಎಂಬುದೇ ಅದಕ್ಕೆ ಗೊತ್ತಾಗದೇ, ಗೊಂದಲದಿಂದ ಅರ್ಧ ದಾರಿಯಲ್ಲೇ ನಿಲ್ಲುವಂತಾಯಿತು. ದೊಡ್ಡ ಗಾತ್ರದ ಬಸ್ಸೊಂದು ಬರಲು, ಸಣ್ಣ ಗಾತ್ರದ ಸೈಕಲ್ ಇಲ್ಲಿರುವುದು ಅರಿವಾಗದೆ ಇನ್ನೇನು ಡಿಕ್ಕಿಯಾಗುವಂತಾದಾಗ, ಯಾರೋ ಬಂದು ಸೈಕಲನ್ನೆಳೆದು ರಸ್ತೆ ಬದಿಗೆ ಬಿಸಾಕಿದರು.

ಇನ್ನೂ ನಾನು ಇಲ್ಲೇ ಇದ್ದರೆ ಬದುಕಲಾರೆನೇನೋ ಎಂಬಷ್ಟು ಜಖಮ್ ಆಗಿರುವ ಸೈಕಲ್, ಮತ್ತೆ ಅಪಾರ್ಟ್‌ಮೆಂಟ್ ಸೇರುವುದೇ ಲೇಸು ಎಂದು ಅತ್ತ ಸಾಗಿತು. ತಾನು ಯಾವ ದಾರಿ ಹಿಡಿದು ಬಂದೆನೋ ಅದೇ ದಾರಿಯಲ್ಲಿ ಮರಳುವುದು ಅದಕ್ಕೆ ಸಾಧ್ಯವಾಗಲಾರದೆ ಅತ್ತಿಂದಿತ್ತ ಇತ್ತಿಂದತ್ತ ಅಲೆದಾಡಿ ಸುಸ್ತಾಯಿತು. ಕೊನೆಗೂ ಅಪಾರ್ಟ್‌ಮೆಂಟ್‌ನ ಎದುರು ಬಂದುನಿಂತರೆ, ತಾನು ಯಾರೋ ಹೊರಗಿಂದ ಬಂದವನೆಂದು ಭಾವಿಸಿದ ಸೆಕ್ಯುರಿಟಿ ಅಂಕಲ್ ಸೈಕಲನ್ನು ಒಳಗೆ ಬಿಡಲೇ ಇಲ್ಲ. ಹಾಗಾದರೆ ನಾನಿನ್ನು ಇಲ್ಲೇ ಇರಬೇಕೇ? ರಸ್ತೆ ಬದಿ? ನನ್ನ ಮನೆ ಒಳಗಿದೆಯಲ್ಲಾ? ಇನ್ನು ನಾನು ಮನೆ ಸೇರುವುದು ಹೇಗೆ? ಈ ರೀತಿ ಬಗೆ ಬಗೆಯಾದ ಚಿಂತೆ ಸೈಕಲನ್ನು ಕಾಡತೊಡಗಿತು.

ಯಾಕಾದರೂ ಹೇಳದೇ ಕೇಳದೇ ಬಂದೆ... ಹೇಳಿ ಬಂದಿದ್ದರೆ ನಾನೆಲ್ಲಿದ್ದೇನೆಂದು ಮನೆಯವರಿಗೆ ಗೊತ್ತಾಗುತ್ತಿತ್ತು. ಈಗ ನಾನು ಮತ್ತೆ ಅವರನ್ನು ಹೇಗೆ ಸೇರಲಿ? ಎಂದು ದಿಕ್ಕೆಟ್ಟು ಕಂಗಾಲಾಯಿತು. ಎಷ್ಟು ಹೊತ್ತು ನಾನಿಲ್ಲೇ ಅನಾಥವಾಗಿರಬೇಕು? ಇವರು ಯಾರಾದರೂ ನನ್ನನ್ನು ಹುಡುಕಿಕೊಂಡು ಬಂದಾರೆಯೇ? ನಾನು ನನ್ನದು ಎಂದುಕೊಂಡ ಜಗತ್ತಿಗೆ ನಾನೇನೂ ಅಲ್ಲವೇನೋ ಎಂಬ ಯೋಚನೆ ಒಂದು ಕ್ಷಣ ಬಂದುಬಿಟ್ಟಿತು. ಆ ಯೋಚನೆಯಿಂದ ಅದೆಷ್ಟು ದುಃಖವಾಯ್ತೆಂದರೆ, ಸತ್ತುಹೋಗುವಷ್ಟು! ಆದರೆ ಅದಷ್ಟು ಸುಲಭವೇ? ಯಾರಾದರೂ ಈ ಪರಿಸ್ಥಿತಿಯಿಂದ ನನ್ನನ್ನು ಪಾರು ಮಾಡಬಾರದೇ ಎಂದುಕೊಳ್ಳುತ್ತಿರುವಂತೇ ಶಮಿ ಕಾಣಿಸಿದಳು. ಅವಳು ಅತ್ತಿತ್ತ ನೋಡುತ್ತಾ ಏನನ್ನೋ ಹುಡುಕುತ್ತಿರುವಂತೆ ನಡೆದು ಬರುತ್ತಿದ್ದಾಳೆ. ಬಹುಶಃ ನನ್ನನ್ನೇ ಇರಬೇಕು. ಮರುಕ್ಷಣ ನನಗೆ ಬದುಕಬೇಕು ಎನಿಸಿತು!